ನಿರ್ದೇಶಕರ ಕಛೇರಿ.ಪದವಿ ಪೂರ್ವ ಶಿಕ್ಷಣ ಇಲಾಖೆ ಸಂಪಿಗೆ ರಸ್ತೆ. 18ನೇ ಕ್ರಾಸ್‌ಗೆ,ಮಲ್ಲೇಶ್ವರಂ.
**ಬೆಂಗಳೂರು-12**

ಸಂಖ್ಯೆ:ಪಪೂಶಿ/ಶೈಶಾ-04/ವಿಮದಿ/2015-16 ದಿನಾಂಕ 02/11/2015

**ಸುತ್ತೋಲೆ**

ವಿಷಯ:"ವಿಶ್ವ ಮಕ್ಕಳ ದಿನಾಚರಣೆ"ಯ ಪ್ರಯುಕ್ತ ರಾಜ್ಯದ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳಿಗೆ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿಂತೆ ಕಡ್ಡಾಯವಾಗಿ ಕಾರ್ಯಕ್ರಮಗಳನ್ನು ಆಯೋಜಿಸುವ ಕುರಿತು.

ಉಲ್ಲೇಖ:ಕರಾಮಹರಾ/ಆಡಳಿತ/ಶಿಕ್ಷಣ ಇಲಾಖೆ (ಪ.ಪೂರ್ವ)/2015-16/1182 ದಿನಾಂಕ 07/10/2015.

*****

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳ ಕಾಯ್ದೆ 2005ರ ಕಲಂ 13ರನ್ವಯ ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪ್ರಕರಣಕ್ಕೆ ಸಮಬಂದಿಸಿದಂತೆ ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಹೊಂದಿರುತ್ತದೆ ಹಾಗೂ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ಸರ್ಕಾರದ ಕಾರ್ಯನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಪರಿಶೀಲಿಸಿ ಶಿಫಾರಸ್ಸು ಮಾಡಲು ಅಧಿಕಾರ ಹೊಂದಿರುತ್ತದೆ.

ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ (United Nations convention on the Rights of the Child) ಯು 1989ರಲ್ಲಿ ಜಾರಿಗೆ ಬಂದಿರುತ್ತದೆ. ಈ ಒಡಂಬಡಿಕೆಗೆ ಭಾರತ ಸರ್ಕಾರವು 11 1992ರಲ್ಲಿ ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಬದ್ಧವಾಗಿದೆ ಎಂದು ಒಪ್ಪಿ ಸಹಿ ಹಾಕಿರುತ್ತದೆ. ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ (United Nations convention on the Rights of the Child) ಯಲ್ಲಿ ಪ್ರಮುಖವಾಗಿ ಕಂಡು ಬರುವುದು ನಾಲ್ಕು ಮೂಲ ಹಕ್ಕುಗಳು:

1. **ಬದುಕುವ ಹಕ್ಕುಗಳು:** ಪ್ರತಿಯೊಂದು ಮಗುವಿಗೂ ಜನ್ಮ ಹೊಂದುವ ಜೀವಿಸುವ, ಉತ್ತಮ ಆರೋಗ್ಯ, ಸೇವೆ ಪೌಷ್ಠಿಕ ಆಹಾರ ಪಡೆಯುವ, ಒಂದು ಹೆಸರು ಹೊಂದಿರುವ, ತಾನು ಒಂದು ದೇಶದ ಪ್ರಜೆ ಎಂದು
1. ಗುರುತಿಸಿಕೊಳ್ಳುವ ಹಕ್ಕು.
2. **ರಕ್ಷಣೆಯ ಹಕ್ಕುಗಳು**: ದಬ್ಬಾಳಿಕೆ, ತೊಂದರೆ, ಕಿರುಕುಳ, ಹಿಂಸೆಗಳ ವಿರುದ್ಧ, ತುರ್ತು ಸಂದರ್ಭದಲ್ಲಿ ಮತ್ತು ಸಶಸ್ತ್ರ ಘರ್ಷಣೆಗಳಾದ ರಕ್ಷಣೆ ಪಡೆಯುವ ಹಕ್ಕು.
3. **ವಿಕಾಸ ಹೊಂದುವ** ಹಕ್ಕುಗಳು: ಶಿಕ್ಷಣ, ಶೈಶವದಲ್ಲಿ ಬೆಳೆಯಲು ಅವಕಾಶ, ಆರೋಗ್ಯ ರಕ್ಷಣೆ, ಸಾಮಾಜಿಕ ಭದ್ರತೆ, ಬಿಡುವು, ಮನೋರಂಜನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ.

4. **ಭಾಗವಹಿಸುವ ಹಕ್ಕುಗಳು:** ಮಕ್ಕಳ ಅಭಿಪ್ರಾಯಗಳಿಗೆ ಮನ್ನಣೆ, ಸ್ವಾತಂತ್ರ್ಯ ಮಾಹಿತಿಯ ಅಭ್ಯತೆ, ಚಿಂತನೆಗೆ, ಬುದ್ಧಿ ಬೆಳವಣಿಗೆಗೆ ಅವಕಾಶ, ಸಂಘಟಿತರಾಗುವ ಮತ್ತು ಧಾರ್ಮಿಕ ನಂಬುಗೆಯ ಹಕ್ಕುಗಳು.

ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವ ಸಂಸ್ಥೆಯ ನವೆಂಬರ್ 20 1989ರಂದು ಈ ಒಡಂಬಡಿಕೆಗೆ ಸಹಿ ಹಾಕಿರುವುದರಿಂದ ಆ ದಿನವನ್ನು "ವಿಶ್ವ ಮಕ್ಕಳ ದಿನಾಚರಣೆ" ಎಂಧು ಘೋಷಣೆ ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿ ವರ್ಷ ನವೆಂಬರ್ 20 ರಂದು ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ಭಾಷಣ ಹಾಗೂ ಪ್ರಬಂಧ ಸ್ಪರ್ಧೆಯ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಆಯೋಜಿಸಲು ಎಲ್ಲಾ ಕಾಲೇಜುಗಳ ಪ್ರಾಂಶುಪಾರಿಗೆ ಸೂಕ್ತ ನಿರ್ದೇಶನ ನೀಡುವಂತೆ ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಸೂಚಿಸಿದೆ. ಈ ಎರಡೂ ಸ್ಪರ್ಧೆಗಳಲ್ಲಿ ಭಾಗವಹಿಸುವ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಆಯೋಗದಿಂದ ಪ್ರಮಾಣ ಪತ್ರಗಳನ್ನು ನೀಡಲಾಗುವುದು.

ಜಂಟಿ ನಿರ್ದೇಶಕರು (ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ ಮುಂದಿನ ಕ್ರಮಕ್ಕಾಗಿ.
2. ಮಾನ್ಯ ನಿರ್ದೇಶಕರ ಆಪ್ತಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ.
3. ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, 4ನೇ ಮಹಡಿ, ಕೃಷಿ ಭವನ, ನೃಪತುಂಗ ರಸ್ತೆ, ರಾಣಿ ಚನ್ನಮ್ಮ ವೃತ್ತ, ಬೆಂಗಳೂರು-560002.
4. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ವೆಬ್ ಸೈಟ್‌ಗೆ ಅಳವಡಿಸಲು.
4. ಕಛೇರಿ ಪ್ರತಿ.